**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ., ಮೂಡಿಗೆರೆ.**

**ಸಿ.ಸಿ ನಂಬರ್ಃ 1607/2023**

ಪಿರ್ಯಾದಿಃ ರಾಜ್ಯ, ಪರವಾಗಿ ಬಾಳೂರು ಪೊಲೀಸ್,
ಮೂಡಿಗೆರೆ ತಾಲ್ಲೂಕು.

ವಿರುದ್ಧ

ಆರೋಪಿಃ ಶ್ರೀನಿವಾಸ ಬಿ.ಎನ್.,
ವಯಸ್ಸು ಸುಮಾರು 50 ವರ್ಷ,
ಬಿನ್ ದಿಃ ಶೇಷಯ್ಯ ಬಿ.ಆರ್.,
ವಾಸಃ ಬಾಳೂರು ಹೊರಟ್ಟಿ ಗ್ರಾಮ,
ಬಾಳೂರು ಅಂಚೆ ಮತ್ತು ಹೋಬಳಿ,
ಮೂಡಿಗೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

* * * * *

**ದಂಡ ಪ್ರಕ್ರಿಯಾ ಸಂಹಿತೆ 313 ರ ಅಡಿಯಲ್ಲಿ ಮಾಡಿಕೊಳ್ಳಲಾದ ಆರೋಪಿಯ ಹೇಳಿಕೆ**

ಪ್ರಶ್ನೆ 1) ಅಭಿಯೋಜನೆಯ ಪರ ಹಾಜರಾದ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದೀರಾ?

ಉತ್ತರಃ

ಪ್ರಶ್ನೆಃ 2) ಫ್ರಾಸಾ-1 ಜ್ಯೋತಿ ಬಿ.ಆರ್. ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 14.01.2023 ರಂದು ಆರೋಪಿಯಾದ ನೀವು ಚಾಸಾ-2 ರವರ ಮೊಬೈಲ್ ಗೆ ಕರೆ ಮಾಡಿ ಬೋಳೀಮಗನೆ ನಾಯಿ ಕಟ್ಟಾಕಲು ಆಗುವುದಿಲ್ಲವ ಇಲ್ಲದಿದ್ದರೆ ಸಾಯಿಸುತ್ತೇನೆ ಎಂದು ಬಾಯಿಗೆ ಬಂದ ಹಾಗೇ ಬೈದು ಬೆದರಿಕೆ ಹಾಕಿ, ಯಾರು ಕರೆ ಮಾಡಿದ್ದಾರೆ ಎಂದು ಚಾಸಾ-2 ರವರ ಬಳಿ ಕೇಳಿದಾಗ ಅವರ ಧ್ವನಿ ಕೇಳಿದ ಆರೊಪಿಯಾದ ನೀವು ಪೋನ್ ಕಟ್ ಮಾಡಿ, ಚಾಸಾ-2 ರವರು ಕೆಲಸಕ್ಕೆ ಹೋಗಬೇಕೆಂದು ಅವರ ಮನೆಯ ಹಾಲ್ ನಲ್ಲಿ ತಿಂಡಿತಿನ್ನುತ್ತ ಕುಳಿತಿದ್ದರು. ಬೆ.7.30 ರ ಸಮಯಕ್ಕೆ ಆರೋಪಿಯು ಅವರ ಮನೆಯ ಬಾಗಿಲನ್ನು ಹೊದ್ದು ಅಕ್ರಮವಾಗಿ ಅವರ ಮನೆಯ ಒಳಗೆ ಬಂದರು. ಆರೋಪಿಯು ಒಂದು ದೊಣ್ಣೆಯನ್ನು ಹಿಡಿದುಕೊಂಡು ಬಂದು ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಚಾಸಾ-2 ರವರಿಗೆ ಹೊಡೆಯಲು ಹೋದರು. ಆಗ ಅವರು ಅವರ ಎಡಗೈ ಅಡ್ಡಕೊಟ್ಟಾಗ ಅವರ ಎಡಗೈನ ಮುಂಗೈಗೆ ಪೆಟ್ಟಾಗಿದೆ. ಯಾಕೆ ಹೊಡೆಯುತ್ತಿದ್ದಾರೆ ಎಂದು ಆರೋಪಿಯನ್ನು ಹೊರಕ್ಕೆ ದೂಡಿದಾಗ ಆರೋಪಿಯು ಅವರಿಗೂ ಸಹಾ ನಿನ್ನನ್ನು ಬಿಡುವುದಿಲ್ಲ ಸೂಳೆ ಎಂದು ಅವರ ಕೈಯನ್ನು ಚಿವುಟಿ ಬಳೆ ಹೊಡೆದು ಹಾಕಿರುತ್ತಾರೆ. ಅದೇ ದೊಣ್ಣೆಯಿಂದ ಅವರನ್ನು ಹೊಡೆಯಲು ಬಂದಾಗ ಅವರು ತಪ್ಪಿಸಿಕೊಂಡಿದ್ದು ಆರೋಪಿಯು ಅವರ ಮನೆಯ ಕಿಟುಕಿಗೆ ಹೊಡೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆ: 3) ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಚಾಸಾ-2 ರವರು ಕೈನೋವು ಎಂದು ಕಿರುಚಾಡಿದಾಗ ಚಾಸಾ-3 ಮತ್ತು ಅಕ್ಕಪಕ್ಕದವರು ಬಂದು ಜಗಳ ಬಿಡಿಸಿ ಆರೋಪಿಯನ್ನು ಹೊರಗೆ ಕಳುಹಿಸಿರುತ್ತಾರೆ. ಚಾಸಾ-4 ರವರ ಓಮಿನಿ ಗಾಡಿಯಲ್ಲಿ ಚಾಸಾ-4 ರವರನ್ನು ಮೂಡಿಗೆರೆ ಆಸ್ಪತ್ರೆಗೆ ಕರೆದುಕೊಂಡು ಬಂದರು. ಅಲ್ಲಿ ಎಕ್ಸರೇ ಮಷಿನ್ ಇಲ್ಲ ಎಂದು ಅವರನ್ನು ಚಿಕ್ಕಮಗಳೂರು ಆಸ್ಪತ್ರೆಗೆ ಕಳುಹಿಸಿದ್ದರು. ಆ ಆಸ್ಪತೆಯಲ್ಲಿ ಎಕ್ಸರೇ ಮಾಡಿದ ನಂತರ ಮೂಳೆ ಮುರಿದು ಹೋಗಿದೆ ಎಂದು ಹೇಳಿದರು. ಆ ದಿನ ಮ.3.00 ಗಂಟೆಗೆ ಅವರು ಬಾಳೂರು ಪೋಲಿಸ್ ಠಾಣೆಗೆ ಹೋಗಿ ಆರೊಪಿಯ ವಿರುದ್ಧ ದೂರು ಕೊಟ್ಟಿದ್ದೇನೆ. ಪೋಲಿಸರು ಮರುದಿನ ಅವರ ಮನೆಗೆ ಬಂದು ಮಹಜರ್ ಮಾಡಿ ಕಿಟಕಿ ಗ್ಲಾಸ್, ಬಳೆ ಚೂರು ಹಾಗೂ ಆರೋಪಿ ತಂದಿದ್ದ ದೊಣ್ಣೆ ಅವರ ಮನೆಯಲ್ಲಿ ಇದಿದ್ದನ್ನು ತೆಗೆದುಕೊಂಡು ಹೋದರು. ಆನಂತರ ದಿ.03.02.2023 ರಂದು ಅವರು ನ್ಯಾಯಾಲಯಕ್ಕೆ ಬಂದು ಹೇಳಿಕೆ ಕೊಟ್ಟಿದ್ದೇನೆ. ಮಹಜರ್ ನ್ನು ಬೆ.11.00 ರಿಂದ 12.30 ರವರೆಗೂ ಬರೆದಿದ್ದಾರೆ. ಮಹಜರ್ ಕಾಲಕ್ಕೆ ಅವರು ಸ್ಥಳವನ್ನು ತೋರಿಸಿದ್ದು ಆಗ ಚಾಸಾ-5 ಮತ್ತು 6 ರವರು ಹಾಜರಿದ್ದರು. ಅವರು ಸಾಕಿರುವ ನಾಯಿ ಆರೋಪಿಗೆ ಸೇರಿದ ಕೋಳಿಯನ್ನು ತಿಂದಿದೆ ಎಂದು ಗಲಾಟೆಯಾಗಿದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆ: 4) ಫ್ರಾಸಾ-2 ಪ್ರಸನ್ನ ಬಿ.ಆರ್. ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ14.01.2023 ರಂದು ಸಮಯಕ್ಕೆ ಆರೋಪಿಯಾದ ನೀವು ಅವರಿಗೆ ಫೋನ್ ಮಾಡಿ ನಿನ್ನ ನಾಯಿ ಕಟ್ಟಿ ಹಾಕು ಎಂದು ಅವಾಚ್ಯ ಶಬ್ದಗಳಿಂದ ಬೈದು, ನಾಯಿಯನ್ನು ಕಟ್ಟಿ ಹಾಕದಿದ್ದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದು, ಆಗ ಚಾಸಾ-1 ರವರು ಯಾರು ಕರೆ ಮಾಡಿದ್ದಾರೆ ಎಂದು ಕೇಳಿದಾಗ ಆರೋಪಿ ಫೋನ್ ಕಟ್ ಮಾಡಿರುತ್ತಾರೆ. ಬೆಳಗ್ಗೆ 7.30 ರ ಸಮಯಕ್ಕೆ ಮನೆಯ ಹಾಲ್ ನಲ್ಲಿ ತಿಂಡಿ ತಿನ್ನುತ್ತ ಕುಳಿತಿರುವಾಗ, ಆರೋಪಿಯಾದ ನೀವು ಏಕಾಏಕಿ ಅವರ ಮನೆಯ ಬಾಗಿಲನ್ನು ಒದ್ದು, ಒಂದು ಬಡಿಗೆ ಹಿಡಿದುಕೊಂಡು ಒಳಗೆ ಬಂದು, ಬಡಿಗೆಯಲ್ಲಿ ಏಕಾಏಕಿ ಅವರ ತಲೆಗೆ ಹೊಡೆಯಲು ಬಂದಾಗ ಅವರು ಅವರ ಎಡಗೈಯನ್ನು ಅಡ್ಡ ಕೊಟ್ಟಾಗ ಅವರ ಕೈಗೆ ಪೆಟ್ಟು ಬಿದ್ದಿದೆ. ಅವರು ಕೂಗಿದಾಗ ಅವರ ಹೆಂಡತಿ ಚಾಸಾ-1 ರವರು ಬಂದು ಆರೋಪಿಯನ್ನು ದೂಡಿಕೊಂಡು ಹೊರಗೆ ಹೋದರು, ಅವರು ಕೂಗುತ್ತಾ ಅವರ ಹಿಂದೆ ಹೋದಾಗ, ಆರೋಪಿಯು ಚಾಸಾ-1 ರವರ ಬಲಗೈಯನ್ನು ತಿರುಚಿ ಬಳೆಯನ್ನು ಹೊಡೆದು ಹಾಕಿ ಅವರಿಗು ಸಹ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆ: 5) ಫ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಚಾಸಾ-1 ರವರಿಗೆ ಸಹ ಬಡಿಗೆಯಿಂದ ಹೊಡೆಯಲು ಹೋದಾಗ ಅವರು ತಪ್ಪಿಸಿಕೊಂಡಿದ್ದು, ಬಡಿಗೆಯು ಅವರ ಮನೆಯ

ಕಿಟಕಿ ಗಾಜಿಗೆ ಹೊಡೆದು ಗಾಜು ಪಡಿಯಾಗಿರುತ್ತದೆ. ಅವರು ಕೂಗಿದ್ದನ್ನು ಕೇಳಿಸಿಕೊಂಡು ಚಾಸಾ-3 ಮತ್ತು 4 ರವರು ಬಂದು ಆರೋಪಿಯ ಕೈಯಲ್ಲಿ ಇದ್ದ ಬಡಿಗೆಯನ್ನು ಕಿತ್ತುಕೊಂಡು ಅವರ ಮನೆಯ ಒಳಗೆ ಎಸೆದರು. ಅವರ ಕೈಯಲ್ಲಿ ನೋವು ಇದ್ದ ಕಾರಣ ಚಾಸಾ-1, 3 ಮತ್ತು 4 ರವರು ಚಾಸಾ-4 ರವರ ಓಮಿನಿ ಕಾರಿನಲ್ಲಿ ಅವರನ್ನು ಮೂಡಿಗೆರೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದರು. ಅಲ್ಲಿ ಎಕ್ಸರೇ ಇಲ್ಲಾ ಎಂದು ಚಿಕ್ಕಮಗಳೂರಿನ ಆಸ್ಪತ್ರೆಗೆ ಅವರನ್ನು ಕಳುಹಿಸಿದರು. ಚಿಕ್ಕಮಗಳೂರಿನ ಆಸ್ಪತ್ರೆಯಲ್ಲಿ ಎಕ್ಸರೆ ಮಾಡಿ, ಅವರ ಕೈ ಮೂಳೆ ಮುರಿದಿದೆ ಎಂದು ಹೇಳಿದರು. ನಂತರ ಅವರು ಬಾಳೂರಿನ ಪೊಲೀಸ್ ಠಾಣೆಗೆ ಹೋಗಿದ್ದು, ಅಲ್ಲಿ ಚಾಸಾ-1 ರವರು ದೂರನ್ನು ಟೈಪ್ ಮಾಡಿಸಿ ಕೊಟ್ಟಿದ್ದಾರೆ. ಅವರ ಕೈಗೆ ರಾಡ್ ಹಾಕಿದ್ದು, ಸುಮಾರು ರೂ. 1,50,000/- ಖರ್ಚಾಗಿರುತ್ತದೆ ಎಂದು ತಿಳಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 6) ಫ್ರಾಸಾ-3 ಮನು ಬಿ.ಹೆಚ್. ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂದ 14.01.2023 ರಂದು ಚಾಸಾ-2 ರವರ ಮನೆಯ ಬಳಿ ಜೋರಾಗಿ ಮಾತನಾಡುತ್ತಿರುವುದು ಕೇಳಿಸಿತು. ಆ ಸಮಯಕ್ಕೆ ಅವರು ಮತ್ತು ಚಾಸಾ-3 ರವರು ಚಾಸಾ-2 ರವರ ಮನೆಯ ಬಳಿ ಹೋಗಿ ನೋಡಿದಾಗ ಆರೋಪಿಯು ತನ್ನ ಎಡಕೈಯಲ್ಲಿ ಒಂದು ದೊಣ್ಣೆಯನ್ನು ಹಿಡಿದುಕೊಂಡು ತನ್ನ ಬಲಗೈಯಿಂದ ಚಾಸಾ-1 ರವರ ಕೈಯನ್ನು ಹಿಡಿದುಕೊಂಡಿದ್ದರು. ಆರೋಪಿಯು ಚಾಸಾ-1 ರವರಿಗೆ ದೊಣ್ಣೆಯಿಂದ ಹೊಡೆಯಲು ಹೋದಾಗ ಅದು ತಪ್ಪಿ ಚಾಸಾ-2 ರವರ ಮನೆಯ ಕಿಟಕಿಗೆ ತಗಲಿ ಕಿಟಕಿಯ ಗಾಜು ಹೊಡೆದುಹೋಯಿತು. ಚಾಸಾ-2 ರವರು ಜೋರಾಗಿ ಕಿರುಚುತ್ತಿದ್ದರು. ಅವರು ನೋಡುವಾಗ ಚಾಸಾ-2 ರವರ ಎಡಗೈಗೆ ಪೆಟ್ಟಾಗಿತ್ತು. ಅವರು ಮತ್ತು ಚಾಸಾ-1 ಹಾಗೂ ಚಾಸಾ-3 ರವರು ಚಾಸಾ-2 ರವರನ್ನು ಮೂಡಿಗೆರೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು, ನಂತರ ಅಲ್ಲಿಂದ ಚಿಕ್ಕಮಗಳೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದೆವು. ಎಕ್ಸರೇ ಮಾಡಿ ಚಾಸಾ-2 ರವರ ಕೈ ಫ್ರಾಕ್ಚರ್ ಆಗಿದೆ ಎಂದು ತಿಳಿಸಿದ್ದರು. ಆರೋಪಿಯು ಚಾಸಾ-1 ರವರ ನಾಯಿ ತನ್ನ ಕೋಳಿಯನ್ನು ತಿಂದಿದೆ ಎಂದು ಚಾಸಾ-1 ರವರಿಗೆ ಪೋನ್ ಮೂಲಕ ಕೆಟ್ಟ ಪದದಿಂದ ಬೈದಿದ್ದಾರೆ ಎಂದು ಹಾಗೂ ಆರೋಪಿಯು ಚಾಸಾ-2 ರವರಿಗೆ ದೊಣ್ಣೆಯಲ್ಲಿ ಹೊಡೆದಿದ್ದಾರೆ ಎಂದು ತಿಳಿದುಕೊಂಡೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 7) ಫ್ರಾಸಾ-4 ಪ್ರಕಾಶ್ ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 14.01.2023 ರಂದು ಅವರ ಅಣ್ಣನಾದ ಚಾಸಾ-2 ರವರ ಮನೆಯಲ್ಲಿ ಜಗಳವಾಗುತಿತ್ತು. ಅವರು ಮತ್ತು ಚಾಸಾ-4 ರವರು ಅಲ್ಲಿಗೆ ಹೋಗಿ ನೋಡಿದಾಗ ಅಲ್ಲಿ ಆರೋಪಿಯ ತನ್ನ ಬಲಗೈಯಲ್ಲಿ ದೊಣ್ಣೆಯನ್ನು ಹಿಡಿದುಕೊಂಡು ಹಾಗೂ ತನ್ನ ಎಡಗೈಯಲ್ಲಿ ಚಾಸಾ-1 ರವರು ಬಲಗೈಯನ್ನು ಹಿಡಿದುಕೊಂಡು

ಅವರನ್ನು ಉದ್ದೇಶಿಸಿ ಅವಾಚ್ಯ ಶಬ್ದಗಳಿಂದ ಬೈದು ತನ್ನ ಕೈಯಲ್ಲಿ ಇದ್ದ ದೊಣ್ಣೆಯಿಂದ ಚಾಸಾ-1 ರವರಿಗೆ ಹೊಡೆಯಲು ಹೋದಾಗ ಆ ದೊಣ್ಣೆಯು ಮನೆಯ ಕಿಟಕಿಗೆ ತಾಗಿ ಕಿಟಕಿಯ ಗಾಜು ಹೊಡೆದು ಪುಡಿಯಾಯಿತು. ಆರೋಪಿಯು ಚಾಸಾ-1 ರವರ ಕೈಯನ್ನು ಹಿಡಿದುಕೊಂಡಿದ್ದ ಕಾರಣ ಅವರ ಕೈಯಲ್ಲಿ ಇದ್ದ ಬಳೆಯೂ ಸಹಾ ಹೊಡೆದು ಚೂರಾಯಿತು. ಆಗ ಅವರು ಮತ್ತು ಚಾಸಾ-4 ರವರು ಆರೋಪಿಯ ಕೈಯಲ್ಲಿ ಇದ್ದ ದೊಣ್ಣೆಯನ್ನು ಕಿತ್ತು ಮನೆಯ ಹಾಲ್ ಗೆ ಬಿಸಾಡಿದೆವು. ಚಾಸಾ-2 ರವರು ಕೈನೋವು ಎಂದು ಕೂತಿದ್ದರು. ಅವರು, ಚಾಸಾ-1 ಮತ್ತು 4 ರವರು ಚಾಸಾ-2 ರವರನ್ನು ಮೂಡಿಗೆರೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದೆವು. ನಂತರ ಅಲ್ಲಿಂದ ಅವರನ್ನು ಚಿಕ್ಕಮಗಳೂರು ಆಸ್ಪತ್ರೆಗೆ ಹೋಗುವಂತೆ ತಿಳಿಸಿದ್ದು ಅವರು ಅಲ್ಲಿಗೆ ಹೋಗಿ ಚಾಸಾ-2 ರವರಿಗೆ ಚಿಕಿತ್ಸೆ ಕೊಡಿಸಿದೆವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 8) ಫ್ರಾಸಾ-4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಚಿಕ್ಕಮಗಳೂರು ಆಸ್ಪತ್ರೆಯಲ್ಲಿ ಎಕ್ಸರೇ ಮಾಡಿಸಿ ಚಾಸಾ-2 ರವರ ಎಡಗೈ ಮೂಳೆ ಮುರಿದಿದೆ ಎಂದು ಹೇಳಿದರು. ಘಟನೆ ಬಗ್ಗೆ ಚಾಸಾ-1 ರವರನ್ನು ಕೇಳಿದಾಗ ಬೆ.7.30 ರ ಸಮಯಕ್ಕೆ ಆರೋಪಿಯ ಚಾಸಾ-2 ರವರಿಗೆ ಕರೆ ಮಾಡಿ ಅವರ ನಾಯಿ ಕೋಳಿಯನ್ನು ತಿನ್ನುತ್ತಿದೆ ಅದನ್ನು ಕಟ್ಟಿಹಾಕದಿದ್ದರೆ ಅದನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಫೋನ್ ನಲ್ಲಿ ಬೈದು ಆದಾದ 15 ನಿಮಿಷಗಳ ನಂತರ ಆರೋಪಿಯ ಏಕಾಏಕಿ ಚಾಸಾ-2 ರವರ ಮನೆಯ ಬಳಿ ಬಂದು ಬಾಗಿಲು ಹೊದ್ದು ಒಳಗೆ ನುಗ್ಗಿ ಚಾಸಾ-2 ರವರಿಗೆ ದೊಣ್ಣೆಯಿಂದ ಹೊಡೆಯಲು ಹೋದಾಗ ಅವರು ತನ್ನ ಎಡಗೈಯನ್ನು ಅಡ್ಡಕೊಟ್ಟ ಕಾರಣ ಪೆಟ್ಟಾಗಿದೆ ಎಂದು ತಿಳಿಸಿದ್ದರು. ಚಾಸಾ-1 ರವರು ಆರೋಪಿಯನ್ನು ಮನೆಯಿಂದ ಹೊರಗೆ ತಳ್ಳುವಾಗ ಅವರ ಕೈಯನ್ನು ಹಿಡಿದುಕೊಂಡು ಬೈದು ಹೊಡೆಯಲು ಮುಂದಾದರು ಎಂದು ತಿಳಿಸಿದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 9) ಫ್ರಾಸಾ-6 ಡಾ. ಚಂದ್ರಶೇಖರ್ ಜೆ.ಪಿ. ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 14.01.2023 ರಂದು ಬೆ.9.50 ರ ಸಮಯಕ್ಕೆ ಕರ್ತವ್ಯದಲ್ಲಿ ಇದ್ದಾಗ ಚಾಸಾ-2 ರವರು ಹಲ್ಲೆಗೆ ಒಳಗಾದ ಬಗ್ಗೆ ಚಿಕಿತ್ಸೆಗೆಂದು ಹಾಜರಾಗಿದ್ದು, ಅವರನ್ನು ಪರೀಕ್ಷಿಸಿದಾಗ ಅವರ ಎಡಕೈನ ಮೇಲೆ 2x1 ಸೆ.ಮೀ ನಷ್ಟು ತರಚಿದ ಗಾಯ ಕಂಡುಬಂತು ಹಾಗೂ ಸದರಿ ಸ್ಥಳದಲ್ಲಿ ಮೂಳೆಮುರಿತಕ್ಕೊಳಗಾಗಿರುವುದು ತಿಳಿದುಬಂತು. ನಂತರ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಕಳುಹಿಸಿಕೊಟ್ಟಿದ್ದು ಮಂಗಳೂರಿನ ತೇಜಸ್ವಿನಿ ಆಸ್ಪತ್ರೆಯ ಡಿಸ್ ಚಾರ್ಜ್ ಸಮ್ಮರಿಯಂತೆ ಚಾಸಾ-2 ರವರು ಸದರಿ ಮೂಳೆ ಮುರಿತದ ಸಂಬಂಧ ಶಸ್ತ್ರ ಚಿಕಿತ್ಸೆಗೆ ಪಡೆದಿರುವುದು ತಿಳಿದುಬಂತು. ಅವರ ಪ್ರಕಾರ ಚಾಸಾ-2 ರವರಿಗೆ ಆದ ಗಾಯ ಗಂಭೀರ ಸ್ವರೂಪದ್ದಾಗಿದ್ದು ಈ ಸಂಬಂಧ ಈಗ

ನೋಡುತ್ತಿರುವ ಗಾಯದ ಪ್ರಮಾಣಪತ್ರವನ್ನು ಅವರು ನೀಡಿದ್ದು, ದಿ.18.03.2023 ರಂದು ಮೂಡಿಗೆರೆ ಪೋಲಿಸರು ಅವರ ಸಮಕ್ಷಮ ಒಂದು ದೊಣ್ಣೆಯನ್ನು ಹಾಜರುಪಡಿಸಿ ಅದರಿಂದ ಹೊಡೆದರೆ ಚಾಸಾ-2 ರವರಿಗೆ ಆದ ಗಾಯದ ಸಂಬವದ ಕುರಿತು ಅಭಿಪ್ರಾಯ ವರದಿ ನೀಡುವಂತೆ ಕೋರಿದ್ದು ಅದರಂತೆ ಅವರು ಸದರಿ ದೊಣ್ಣೆಯಿಂದ ಹೊಡೆದರೆ ಸದರಿ ಗಾಯ ಆಗುವ ಸಾಧ್ಯತೆ ಇದೆ ಎಂದು ವರದಿ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 10) ಫ್ರಾಸಾ-7 ವಸಂತ ಕೆ. ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ.15.01.2023 ರಂದು ಚಾಸಾ-15 ರವರು ಅವರನ್ನು ಕರೆದುಕೊಂಡು ಬಾಳೂರು ಹೊರಟ್ಟಿಗೆ ಕೆರೆದುಕೊಂಡು ಹೋಗಿ, ಅಲ್ಲಿ ಸಿಕ್ಕ ಚಾಸಾ-5 ಮತ್ತು 6 ರವರನ್ನು ಪಂಚರನ್ನಾಗಿ ನೇಮಕ ಮಾಡಿಕೊಂಡು, ಅಲ್ಲಿಂದ ಚಾಸಾ-1 ರವರ ಮನೆಯ ಬಳಿ ತಲುಪಿ, ಅಲ್ಲಿ ಚಾಸಾ-1 ರವರು ಕೃತ್ಯ ನಡೆದ ಸ್ಥಳವನ್ನು ತೋರಿಸಿದಂತೆ ಪಂಚರ ಸಮಕ್ಷಮ ಮಹಜರ್ ಬರೆದು, ಫೋಟೋಗಳನ್ನು ತೆಗೆಸಿ, ಸ್ಥಳದಲ್ಲಿ ಸಿಕ್ಕ 34½ ಇಂಚು ಉದ್ದದ ಸಿಲ್ವರ್ ಮರದ ಒಣಗಿದ ದೊಣ್ಣೆ, ಹೊಡೆದುಹೋದ ಹಸಿರುವ ಬಣ್ಣದ ಬಳೆಯ ಚೂರುಗಳು, ಆರೋಪಿಯಿಂದ ಹಾನಿಗೊಳಗಾದ ಕಿಟಕಿ ಗಾಜಿನ ಚೂರುಗಳನ್ನು ವಶಕ್ಕೆ ಪಡಿಸಿಕೊಳ್ಳಲಾಗಿದೆ. ಸ್ಥಳಮಹಜರ್ ನ್ನು ಚಾಸಾ-15 ರವರ ಉಕ್ತಲೇಖನದಂತೆ ನಾನು ಬರೆದು ಸಹಿ ಮಾಡಿರುತ್ತೇನೆ. ಮಹಜರ್ ಕಾಲದ ಫೋಟೋಗಳನ್ನು ಇಲಾಖಾ ಕ್ಯಾಮೆರಾದಲ್ಲಿ ತೆಗೆದಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 11) ಫ್ರಾಸಾ-7 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 24.01.2023 ರಂದು ಚಾಸಾ-16 ರವರು ಬೆ.10.45 ರ ಸಮಯಕ್ಕೆ ಆರೋಪಿಯ ಸ್ವ ಇಚ್ಚಾ ಹೇಳಿಕೆಯನ್ನು ಪಡೆದುಕೊಂಡಿದ್ದು, ಸದರಿ ಹೇಳಿಕೆಯನ್ನು ಅವರು ಕಂಪ್ಯೂಟರ್ ನಲ್ಲಿ ಬೆರಳಚ್ಚು ಮಾಡಿ, ಆನಂತರ ಚಾಸಾ-16 ರವರು ಅವರನ್ನು ಹಾಗೂ ಠಾಣಾ ಹೆಚ್.ಸಿ. ನಂದೀಶ್ ರವರ ಬೆಂಗಾವಲಿನಲ್ಲಿ ಆರೋಪಿಯನ್ನು ಕರೆದುಕೊಂಡು ಆರೋಪಿಯು ನುಡಿದು ತೋರಿಸಿದಂತೆ ಆರೋಪಿ ಮನೆ ಮುಂದೆ ರಸ್ತೆಗೆ ಮುಖವಾಗಿ ನಿರ್ಮಿಸಿರುವ ಮರದ ಗೇಟ್ ಬಳಿ ತಲುಪಿ ಅಲ್ಲಿ ಗೇಟ್ ಗೆ ಅಳವಡಿಸಿದ್ದ ಮರದ ಪೋಲ್ ಗಳನ್ನು ತೋರಿಸಿ, ಅದರಲ್ಲಿ ಒಂದು ಪೋಲ್ ನ್ನು ತೆಗೆದುಕೊಂಡು ಹೋಗಿ ದಿ.14.01.2023 ರಂದು ಬೆ.7.30 ರ ಸಮಯಕ್ಕೆ ಚಾಸಾ-2 ರವರಿಗೆ ಹಲ್ಲೆ ಮಾಡಲು ಬಳಸಿರುತ್ತೇನೆ ಎಂದು ನುಡಿದಿದ್ದು, ಆ ಸಮಯಕ್ಕೆ ಚಾಸಾ-7 ಮತ್ತು 8 ರವರ ಸಮಕ್ಷಮ ಮಹಜರ್ ಬರೆಯಲಾಗಿದೆ. ಮಹಜರ್ ನ್ನು ಚಾಸಾ-16 ರವರ ಉಕ್ತಲೇಖನದಂತೆ ಅವರೇ ಬರೆದು, ಮಹಜರ್ ಕಾಲದ ಫೋಟೋವನ್ನು ತೆಗೆದಿರುತ್ತೇನೆ. ಅದೇದಿನ ಫೋಟೋಗಳನ್ನು ಸಿಡಿಗೆ ಅಳವಡಿಸಿ ಈ ಸಂಬಂಧ ಪ್ರಮಾಣಪತ್ರವನ್ನು ನೀಡಿರುತ್ತೇನೆ. ದಿ.15.01.2023 ರಂದು ತನಿಖಾಧಿಕಾರಿಗಳ

ಉಕ್ತಲೇಖನದಂತೆ ಸಾಕ್ಷಿದಾರರ ಹೇಳಿಕೆಗಳನ್ನು ಬೆರಳಚ್ಚು ಮಾಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 12) ಫ್ರಾಸಾ-9 ಪವನ್ ಕುಮಾರ್ ಸಿ.ಸಿ. ರವರು ತಮ್ಮ ಸಾಕ್ಷ್ಯದಲ್ಲಿ ದಿ.24.01.2023 ರಂದು ಅವರು ಪ್ರಕರಣದ ಕಡತವನ್ನು ಚಾಸಾ-15 ಜಾಫರ್ ಶರೀಫ್ ರವರಿಂದ ಪಡೆದುಕೊಂಡು, ಆರೋಪಿ ಪತ್ತೆಗೆ ಚಾಸಾ-15 ಮತ್ತು ಚಾಸಾ-12 ಅಭಿಷೇಕ್ ರವರನ್ನು ನೇಮಕ ಮಾಡಿರುತ್ತೇನೆ. ಅದೇದಿನ ಬೆ.10.45 ಕ್ಕೆ ಆರೋಪಿಯನ್ನು ಅವರ ಮುಂದೆ ಹಾಜರುಮಾಡಿರುತ್ತಾರೆ. ನಂತರ ಕಾನೂನು ಬದ್ಧವಾಗಿ ಬೆ.11.00 ಗಂಟೆಗೆ ಅವರನ್ನು ದಸ್ತಗಿರಿ ಕ್ರಮವನ್ನು ಜರುಗಿಸಿರುತ್ತೇನೆ ಮತ್ತು ಸ್ವ ಇಚ್ಚಾ ಹೇಳಿಕೆಯನ್ನು ಪಡೆದಿರುತ್ತೇನೆ. ಅವರ ಹೇಳಿಕೆಯಂತೆ ಅವರು ಅವರನ್ನು ಕರೆದುಕೊಂಡು ಹೋಗಿ ಆರೋಪಿಯ ಮನೆಯ ಗೇಟ್ ಬಳಿ ಕೃತ್ಯಕ್ಕೆ ಬಳಸಿದ ಆಯುಧವನ್ನು ತೆಗೆದುಕೊಂಡ ಸ್ಥಳವನ್ನು ತೋರಿಸುವುದಾಗಿ ತಿಳಿಸಿರುತ್ತಾರೆ. ಅದರಂತೆ ಅವರು ಆ ಸ್ಥಳಕ್ಕೆ ಹೋಗಿ ಚಾಸಾ-7 ರಮೇಶ್ ಮತ್ತು ಫ್ರಾಸಾ-8 ಬಿಳಿಯಪ್ಪ ರವರ ಸಮಕ್ಷಮದಲ್ಲಿ ಸ್ಥಳ ಮಹಜರ್ ನ್ನು ಜರುಗಿಸಿದ್ದು, ಆ ಸಮಯದಲ್ಲಿ ಫೋಟೋಗಳನ್ನು ತೆಗೆಸಿರುತ್ತೇನೆ. 65(ಬಿ) ಪ್ರಮಾಣಪತ್ರವನ್ನು ಫ್ರಾಸಾ-7 ವಸಂತ ರವರಿಂದ ಪಡೆದಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 13) ಫ್ರಾಸಾ-9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಆರೋಪಿಯು ಮುಂದಿನ ತನಿಖೆಗೆ ಅವಶ್ಯಕತೆ ಇಲ್ಲದ ಕಾರಣ ನ್ಯಾಯಾಲಯದ ಮುಂದೆ ಅವರನ್ನು ಹಾಜರುಪಡಿಸಿರುತ್ತೇನೆ. ಅದೇದಿನ ಫ್ರಾಸಾ-2 ಪ್ರಸನ್ನ ರವರ ತೇಜಸ್ವಿ ಆಸ್ಪತ್ರೆಯ ಡಿಸ್ ಚಾರ್ಜ್ ಸಮ್ಮರಿಯನ್ನು ಹಾಜರುಪಡಿಸಿ, ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿ.03.02.2023 ರಂದು ಫ್ರಾಸಾ-1 ಜ್ಯೋತಿ ರವರ ಕಲಂ.164 ಸ್ಟೇಟ್ ಮೆಂಟ್ ನ್ನು ಚಾಸಾ-14 ಸಮ್ರೀನ್ ರವರ ಮೂಲಕ ಕಳುಹಿಸಿಕೊಟ್ಟಿರುತ್ತೇನೆ. ದಿ.04.02.2023 ರಂದು ಆರೋಪಿಯ ಮೊಬೈಲ್ ಸಿಡಿಆರ್ ನ್ನು ಪಡೆಯಲು SP, Chikkamagaluru ರವರಿಗೆ ಮನವಿ ನೀಡಿ ನಂತರ ದಿ.06.02.2023 ರಂದು ಸದರಿ ಸಿಡಿಆರ್ ನ್ನು ಪಡೆದಿರುತ್ತೇನೆ. ದಿ.06.02.2023 ರಂದು ಫ್ರಾಸಾ-1 ಮತ್ತು ಆರೋಪಿಯ ಖಾತಾ ಎಕ್ಸ್ಟ್ರಾಕ್ಟ್ ನ್ನು ಪಡೆಯಲು ಚಾಸಾ-9 PDO ಮನವಿಯನ್ನು ನೀಡಿ ದಿ.10.02.2023 ರಂದು ಸದರಿ ದಾಖಲೆಗಳನ್ನು ಪಡೆದಿರುತ್ತೇನೆ. ದಿ.04.02.2023 ರಂದು ಫ್ರಾಸಾ-2 ಪ್ರಸನ್ನ ರವರ X-Ray ಪ್ರತಿಯನ್ನು ಪಡೆಯಲು ಮಲ್ಲೇಗೌಡ ಆಸ್ಪತ್ರೆಗೆ ಮನವಿಯನ್ನು ನೀಡಿ ದಿ.15.02.2023 ರಂದು ಸದರಿ ದಾಖಲೆಯನ್ನು ಪಡೆದಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 14) ಫ್ರಾಸಾ-9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 16.02.2023 ರಂದು ಫ್ರಾಸಾ-6 ಡಾ. ಚಂದ್ರಶೇಖರ್ ರವರಿಗೆ ಫ್ರಾಸಾ-2 ರವರ ಗಾಯದ ಪ್ರಮಾಣಪತ್ರ ಪಡೆಯಲು ಮನವಿಯನ್ನು ನೀಡಿ ಸದರಿ ದಾಖಲೆಯನ್ನು ದಿ.09.03.2023 ರಂದು ಸದರಿ ದಾಖಲೆಯನ್ನು ಪಡೆದಿರುತ್ತೇನೆ. ಅದರಲ್ಲಿ ಸದರಿ ವೈದ್ಯರು ತೀವ್ರ ಸ್ವರೂಪದ ಗಾಯ ಎಂದು ಅಭಿಪ್ರಾಯ ನೀಡಿರುತ್ತಾರೆ. ದಿ.18.03.2023 ರಂದು ಆರೋಪಿತ ಕೃತ್ಯದ ದೊಣ್ಣೆ ಮತ್ತು ಗಾಯದ ಬಗ್ಗೆ ಅಭಿಪ್ರಾಯ ಕೋರಿ ಮನವಿಯನ್ನು ಫ್ರಾಸಾ-6 ರವರಿಗೆ ನೀಡಿರುತ್ತೇನೆ. ಅದರಂತೆ ದಿ.20.03.2023 ರಂದು ಅಭಿಪ್ರಾಯವನ್ನು ಪಡೆದಿರುತ್ತೇನೆ. ದಿ.20.03.2023 ರಂದು ತೀವ್ರ ಸ್ವರೂಪದ ಗಾಯ ಆದ್ದರಿಂದ ಕಲಂ.326 IPC ಯನ್ನು ಅಳವಡಿಸಿಕೊಂಡು ನಂತರ ಅದೇದಿನ ಆರೋಪಿಯ ವಿರುದ್ಧ ಸಾಕ್ಷ್ಯಾಧಾರಗಳು ಕಂಡುಬಂದ ಕಾರಣ ತನಿಖೆಯನ್ನು ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 15) ಫ್ರಾಸಾ-10 ಜಾಫರ್ ಶರೀಫ್ ತಮ್ಮ ಸಾಕ್ಷ್ಯದಲ್ಲಿ ದಿ.14.01.2023 ರಂದು ಅವರು ಠಾಣಾ SHO ಕರ್ತವ್ಯದಲ್ಲಿ ಇದ್ದಾಗ ಮ.3.00 ಗಂಟೆ ಸಮಯಕ್ಕೆ ಚಾಸಾ-1 ಜ್ಯೋತಿ ರವರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿಕೊಂಡು ಠಾ.ಮೊ.ಸಂ.05/2023 ರಂತೆ ಪ್ರ.ವ.ವರದಿ ದಾಖಲಿಸಿ, ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ ನಂತರ ದಿ.15.01.2023 ರಂದು ಕೃತ್ಯ ನಡೆದ ಸ್ಥಳವಾದ ಬಾಳೂರು ಹೊರಟ್ಟಿ ಗ್ರಾಮದಲ್ಲಿ ಚಾಸಾ-5 ಮತ್ತು 6, ಸಾಗರ್ ಮತ್ತು ಸುರೇಶ್ ರವರನ್ನು ನಿಯಮಾನುಸಾರ ಪಂಚರನ್ನಾಗಿ ಬರಮಾಡಿಕೊಂಡು ಅವರ ಸಮಕ್ಷಮ ಚಾಸಾ-1 ರವರು ವಾಸದ ಮನೆಯ ಹತ್ತಿರ ಹೋಗಿ ಅವರು ತೋರಿಸಿದಂತೆ ಮನೆಯ ಮುಂದಿನ ಭಾಗದಲ್ಲಿ ಬಿದ್ದಿದ್ದ ನೀಲಿ ಬಣ್ಣದ ಗಾಜಿನ ಚೂರು, ಹಸಿರು ಬಣ್ಣದ ಬಳೆಯ ಚೂರುಗಳು, ಮನೆಯ ಒಳಗೆ ಇದ್ದ ಒಂದು ಸಿಲ್ವರ್ ಜಾತಿಯ 34 ½ ಇಂಚು ಸುತ್ತಳತೆಯ ಮತ್ತು 6 ½ ಇಂಚು ಉದ್ದದ ದೊಣ್ಣೆಯನ್ನು ಪಂಚರ ಸಮಕ್ಷಮ ವಶಪಡಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 16) ಫ್ರಾಸಾ-10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇನೆ. ಸದರಿ ಮಹಜರ್ ನ್ನು ಮ.11.00 ರಿಂದ 12.30 ಗಂಟೆಯವರೆಗೂ ಸ್ಥಳ ಮಹಜರ್ ಕ್ರಮ ಚಾಸಾ-13 ರವರಿಂದ ಬರೆಸಿ, ಫೋಟೋ ತೆಗೆಸಿರುತ್ತೇನೆ. ವಶಕ್ಕೆ ಪಡೆದ ವಸ್ತುಗಳನ್ನು ಮಾ.ಸಂ.4/2023 ಕ್ಕೆ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ದಿ.15.01.2023 ರಂದು ಚಾಸಾ-2 ಪ್ರಸನ್ನ ಮತ್ತು ಚಾಸಾ-3 ಪ್ರಕಾಶ, ಚಾಸಾ-4 ಮನು ರವರ

ಹೇಳಿಕೆಗಳನ್ನು ಪಡೆದಿರುತ್ತೇನೆ. ದಿ.24.01.2023 ರಂದು ಪ್ರಕರಣದ ಕಡತವನ್ನು ಮುಂದಿನ ತನಿಖೆ ಸಂಬಂಧ ಚಾಸಾ-16 ಪವನ್ ಕುಮಾರ್ ರವರಿಗೆ ನೀಡಿರುತ್ತೇನೆ. ಚಾಸಾ-16 ರವರು ಆದೇಶದ ಮೇರೆಗೆ ಆರೋಪಿಯನ್ನು ಅವರು ಮತ್ತು ಚಾಸಾ-12 ಅಭಿಷೇಕ್ ರವರು ದಸ್ತಗಿರಿ ಮಾಡಿ ಅವರ ಮುಂದೆ ಹಾಜರುಪಡಿಸಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 17) ನೀವು ನ್ಯಾಯಾಲಯಕ್ಕೆ ಹೆಚ್ಚಿಗೆ ಏನಾದರೂ ಹೇಳಲು ಇದೆಯೇ ?

ಉತ್ತರಃ

ಪ್ರಶ್ನೆಃ 18) ನಿಮ್ಮ ಪರ ಸಾಕ್ಷ್ಯ ವಿಚಾರಣೆ ಇದೆಯೇ ?

ಉತ್ತರಃ

(ಮೇಲಿನ ಸಾಕ್ಷಿದಾರರ ಎಲ್ಲಾ ಹೇಳಿಕೆಗಳನ್ನು ಶೀಘ್ರಲಿಪಿಗಾರರಿಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ಆರೋಪಿತನಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡಿರುತ್ತೇನೆಂದು ದೃಢಪಡಿಸಿಕೊಳ್ಳಲಾಗಿದೆ)

Sd/-
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಮ್‌ಎಫ್‌ಸಿ
ನ್ಯಾಯಾಲಯ, ಮೂಡಿಗೆರೆ.

ಮೂಡಿಗೆರೆ
ದಿನಾಂಕಃ 30.07.2026